ಪ್ರಾಮಾಣಿಕವಾದ ವಿನಯವೇ ಆಗಿರಬಹುದು. ಆದರೂ ಸಭ್ಯ ಸಾಮಾಜಿಕನೊಬ್ಬನ ವಿನಯಕ್ಕಿಂತ ಹೆಚ್ಚು ಸತ್ವಪೂರ್ಣವಾದ ವಿನಯ ಎಂದು ಅದನ್ನು ಕರೆಯುವಂತಿಲ್ಲ.

ಜನಪ್ರಿಯ ಸಾಹಿತಿಗಳಲ್ಲಿ ಎರಡನೆಯ ಬಗೆಯವರು ಇನ್ನೂ ಹೆಚ್ಚಿನ ಮಟ್ಟದ ಪ್ರತಿಭಾಶಾಲಿಗಳಾಗಿರುತ್ತಾರೆ; ಸಂವೇದನಾಶೀಲರಾಗಿರುತ್ತಾರೆ. ಸಾಹಿತಿಯ ಕೆಲಸ ಕೇವಲ ತಾನು ಬದುಕುತ್ತಿರುವ ಸಮಾಜದ ಸಿದ್ಧಮೌಲ್ಯಗಳನ್ನು ಕೀರ್ತಿಸುವುದಷ್ಟೇ ಅಲ್ಲ, ಈಗಾಗಲೇ ಆ ಸಮಾಜದ ಸಾಹಿತ್ಯ ಚರಿತ್ರೆಯಲ್ಲಿ ಸಿದ್ಧವಾಗಿರುವ ಅಭಿವೃದ್ಧಿ ವಿಧಾನಗಳನ್ನು ಅನುಸರಿಸುವುದಷ್ಟೇ ಅಲ್ಲ, ಎಂದು ಅವರು ಬಲ್ಲವರಾಗಿರುತ್ತಾರೆ. ಒಟ್ಟು ಮಾನವ ಸಮಷ್ಟಿಯ ಮನಸ್ಸನ್ನು ಮುಟ್ಟಿ ಮಾತನಾಡಿಸುವಂಥ ಸಮಾಜದ ಮೌಲ್ಯಾದರ್ಶಕ್ಕಿಂತ ಹೆಚ್ಚು ವ್ಯಾಪಕವಾದ ಮತ್ತು ಹೆಚ್ಚು ಗಂಭೀರವಾದ ಕೆಲಸ ಸಾಹಿತ್ಯದ್ದು ಎಂಬ ತಿಳಿವಳಿಕೆ ಉಳ್ಳವರಾಗಿರುತ್ತಾರೆ. ಅವರ ಸಾಹಿತ್ಯಕ್ಕೆ ಆ ಮಹತ್ವಾಕಾಂಕ್ಷೆಯೂ ಇರುತ್ತದೆ. ಅವರ ಪ್ರತಿಭೆಗೆ, ಸಂವೇದನಾಶೀಲತೆಗೆ ಈಗಾಗಲೇ ಸಿದ್ಧವಾಗಿರುವ ಜೀವನಮೌಲ್ಯಗಳ ಆಚೆಯ ಸತ್ಯಗಳನ್ನೂ ಕಾಣಬಹುದಾದ ಶಕ್ತಿಯಿರುತ್ತದೆ. ಈಗಾಗಲೇ ಸಿದ್ಧವಾಗಿರುವ ಅಭಿವ್ಯಕ್ತಿ ವಿಧಾನಗಳ ಆಚೆಯ ಸಾಧ್ಯತೆಗಳನ್ನು ಊಹಿಸಬಹುದಾದ ಶಕ್ತಿಯೂ ಇರುತ್ತದೆ. ಆದರೂ ಸ್ವಾನುಭವವೇ ಪರಮ ಪ್ರಮಾಣ ಎಂಬ ಉಗ್ರನಿಷ್ಠೆಯನ್ನು ತೋರಿಸುವ ನೈತಿಕ ಧೈರ್ಯ ಅವರಲ್ಲಿರುವುದಿಲ್ಲ. ಹಾಗಾಗಿ ಧ್ಯಾನಸ್ಥ ತಲ್ಲೀನತೆಯಲ್ಲಿ ಸ್ವಾನುಭವದ ನಿಜದನಿಗಳನ್ನು ಕೇಳಿಸಿಕೊಂಡು, ಅನುಭವದ ಒಳಪದರುಗಳನ್ನು ಶೋಧಿಸಿಕೊಂಡು ಅದಕ್ಕೆ ಅನಿವಾರ್ಯವೆಂಬಂಥ ಅಭಿವ್ಯಕ್ತಿ ಸಾಧ್ಯತೆಗಳನ್ನು ಪರಿಶೋಧಿಸುತ್ತ ಸೃಜನಕ್ರಿಯೆಯಲ್ಲಿ ತೊಡಗುವ ಧೈರ್ಯ ಅಂಥ ಸಾಹಿತಿಗಳಿಗೆ ಇರುವುದಿಲ್ಲ. ಸೃಜನಕ್ರಿಯೆಯಲ್ಲಿ ತೊಡಗುವ ಮೊದಲೂ, ತೊಡಗಿರುವಾಗಲೂ ಅಂಥ ಸಾಹಿತಿಯ ಮನಸ್ಸು ಹೊರಗಿನ ಉಪಾಧಿಗಳಿಂದ ಬಿಡುಗಡೆ ಪಡೆದಿರುವುದಿಲ್ಲ. ಅಂದರೆ ಸೃಜನಕ್ರಿಯೆಯ ಸಂದರ್ಭದಲ್ಲಿಯೂ ತನ್ನ ಸಾಹಿತ್ಯವನ್ನು ಓದಬಹುದಾದ ಓದುಗರು ತನ್ನ ಕೃತಿಗೆ ನೀಡಬಹುದಾದ ಸ್ವಾಗತ, ತೋರಬಹುದಾದ ಪ್ರತಿಕ್ರಿಯೆ ಇತ್ಯಾದಿಗಳನ್ನು ಕುರಿತಂತೆ ಅವನು ತಲೆಕೆಡಿಸಿಕೊಂಡಿರುತ್ತಾನೆ. ತನ್ನ ಸೃಜನಶೀಲ ಸಾಮರ್ಥ್ಯವು ತನ್ನೆಲ್ಲ ಸತ್ವದಿಂದ ಪ್ರಕಾಶಗೊಳ್ಳಲು ಕಾಲ್ತೊಡಕಾಗುವ ಇಂಥ ಉಪಾಧಿಗಳಿಂದ ಮುಕ್ತನಾಗುವ ಧೈರ್ಯವನ್ನು 'ಆತ ಎಂದೂ ತೋರುವುದೇ ಇಲ್ಲ. ಆದ್ದರಿಂದ ಸೃಜನಕ್ರಿಯೆಯ ಉದ್ದಕ್ಕೂ ಹೊರಸಮಾಜದೊಂದಿಗೆ ಪ್ರಜ್ಞಾಪೂರ್ವಕವಾಗಿ ರಾಜೀಸೂತ್ರವೊಂದನ್ನು ಕಂಡು ಹಿಡಿಯುವುದರಲ್ಲಿ ಜೊತೆಜೊತೆಯಲ್ಲೇ ತೊಡಗಿರುತ್ತಾನೆ. ಇದರಿಂದಾಗಿ ಅವನ ಬರವಣಿಗೆಯಲ್ಲಿ ಸಾಮಾಜಿಕ ವಿನಯ ಭಂಗವಾಗಿರುವುದಿಲ್ಲ, ಎಂಬುದು ನಿಜ. ಆದರೆ ಸಾಮಾಜಿಕ ವಿನಯದ ಹೆಸರಿನಲ್ಲಿ ಆತ ಆತ್ಮವಂಚನೆ ಮಾಡಿಕೊಂಡಿರುತ್ತಾನೆ. ತನ್ನ ಸೃಜನಶೀಲ ಚೈತನ್ಯಕ್ಕೆ ಅಪಚಾರ ಮಾಡಿಕೊಂಡಿರುತ್ತಾನೆ. ತಾನು ಕಂಡ ಅನುಭವ ಸತ್ಯಕ್ಕೆ ಅಪ್ರಾಮಾಣಿಕನಾಗಿರುತ್ತಾನೆ. ಹೀಗೆ, ತನ್ನ ಸೃಜನಶಕ್ತಿಯ ನಿರ್ದೇಶನಕ್ಕೆ ತನ್ನನ್ನು ಸಂಪೂರ್ಣ ಒಡ್ಡಿಕೊಳ್ಳದೆ ತನ್ನ ಹೊರಗಿನ ಸಮಾಜದ ಬೇಕುಬೇಡಗಳ ನಿರ್ದೇಶನಕ್ಕೆ ಬಾಗುವ, ವಿಧೇಯನಾಗುವ ಸಾಹಿತಿಯ ವಿನಯವನ್ನೂ ಸಾಹಿತ್ಯದಲ್ಲಿ ಕಾಣುವ ವಿನಯ ಎಂದು ಹೇಳುವುದು ಸರಿಯಾಗಲಾರದು. `ಸಾಹಿತ್ಯವು ಎಲ್ಲರಿಗೂ ಅರ್ಥವಾಗುವಂತಿರಬೇಕು, ಎಲ್ಲರೂ ಮೆಚ್ಚಿ ತಲೆದೂಗುವಂತಿರಬೇಕು ಎಂದು ಹೇಳಿ ಸಾಹಿತ್ಯದ 'ಜನಸಮ್ಮುಖ' ದೃಷ್ಟಿಯನ್ನು ಎತ್ತಿ ಹಿಡಿಯುವಂಥ ಪಂಥದವರು ಜನಪ್ರಿಯ ಸಾಹಿತಿಯ ಈ ಧೋರಣೆಯನ್ನು ಸಾಹಿತಿಯಾದವನು ತೀರಿಸಬೇಕಾದ 'ಜನಋಣ'ದ ಹೆಸರಿನಲ್ಲಿ ಸಮರ್ಥಿಸುವುದುಂಟು. ಆದರೂ ಇಂಥ ಸಾಹಿತಿ, ಜನಸಮ್ಮುಖದೃಷ್ಟಿಯು ಕಾರಣವಾಗಿಯೇ ಆಗಲಿ, ಜನಋಣವನ್ನು ತೀರಿಸಬೇಕೆಂಬ ಕಾರಣಕ್ಕಾಗಿಯೇ ಆಗಲಿ ಅಂತೂ ಒಟ್ಟಿನಲ್ಲಿ ತನ್ನ ಸೃಜನಶೀಲ ಚೈತನ್ಯಕ್ಕೆ, ತನ್ನ ಅನುಭವಸತ್ಯಕ್ಕೆ ಸಂಪೂರ್ಣ ನಿಷ್ಠೆ ತೋರುವುದಿಲ್ಲ ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ಜನಪ್ರಿಯ ಸಾಹಿತಿಯು ತನ್ನ ಅನುಭವಸತ್ಯದಿಂದ ಮುಖತಿರುಗಿಸುವುದಕ್ಕೆ, ತನ್ನ ಸೃಜನಶೀಲ ಚೈತನ್ಯದ ಒತ್ತಡಕ್ಕೆ ತನ್ನ ಪ್ರಜ್ಞೆಯನ್ನು ಸಂಪೂರ್ಣವಾಗಿ ಒಡ್ಡಿಕೊಳ್ಳದೆ ಪಲಾಯನವಾದಿಯಾಗುವುದಕ್ಕೆ ಜನಸಮ್ಮುಖ ದೃಷ್ಟಿಯ ವಾದಕ್ಕಿಂತ ಹೆಚ್ಚು ನಿಜವಾದ